ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,
ಶಿಡ್ಲಘಟ್ಟ.

ಸಿ.ಸಿ. ಸಂಖ್ಯೆಃ 189 /2015

ಫಿರ್ಯಾದುದಾರರುಃ ಸರ್ಕಾರದ ಪರ ಶಿಡ್ಲಘಟ್ಟ ಗ್ರಾಮಾಂತರ ಠಾಣಾ ಪೊಲೀಸರು,

- ವಿರುದ್ಧ -

ಆರೋಪಿ/ಗಳು ಃ1. ಬಿ.ಸಿ. ನಾರಾಯಣಸ್ವಾಮಿ ಬಿನ್ ಲೇಟ್ ಚಿಕ್ಕಣ್ಣ, ಸುಮಾರು 55 ವರ್ಷ,
2. ತಿಮ್ಮಕ್ಕ ಕೋಂ ಬಿ.ಸಿ. ನಾರಾಯಣಸ್ವಾಮಿ, ಸುಮಾರು 48 ವರ್ಷ,
3. ಅನಿಲ್ ಕುಮಾರ್ ಬಿನ್ ಬಿ.ಸಿ. ನಾರಾಯಣಸ್ವಾಮಿ, ಸುಮಾರು 26 ವರ್ಷ,
4. ಶಶಿಕುಮಾರ್ ಬಿನ್ ಬಿ.ಸಿ. ನಾರಾಯಣಸ್ವಾಮಿ, ಸುಮಾರು 20 ವರ್ಷ,

ಎಲ್ಲರೂ ಶಿಡ್ಲಘಟ್ಟ ತಾಲ್ಲೂಕಿನ ಬೈರಸಂದ್ರ ಗ್ರಾಮದ ವಾಸಿಗಳು.

- ದೋಷಾರೋಪಣೆ -

ಶ್ರೀಮತಿ. ಅನಿತ. ಜಿ, ಬಿ.ಕಾಂ., ಎಲ್.ಎಲ್.ಬಿ., ಡಿ.ಎಸ್‌ಸಿ, ಶಿಡ್ಲಘಟ್ಟದ ಪ್ರ.ದ.ನ್ಯಾ.ದಂ. ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಗಳಿಗೆ ಗುರಿಪಡಿಸುತ್ತೇನೆ.

ದಿನಾಂಕಃ 01-04-2014 ರಂದು ಬೆಳಿಗ್ಗೆ 7-30 ಗಂಟೆ ಸಮಯದಲ್ಲಿ ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣಾ ಸರಹದ್ದು, ಬೈರಸಂದ್ರ ಗ್ರಾಮದಲ್ಲಿ ಚಾಸಾ.1 ಮತ್ತು 2 ರವರುಗಳು ಅವರ ಮನೆಯ ಮುಂಭಾಗ ನಿಂತಿದ್ದಾಗ ಆರೋಪಿಗಳಾದ ನೀವುಗಳು ಹಳೆಯ ದ್ವೇಷವನ್ನಿಟ್ಟುಕೊಂಡು ಏಕೋದ್ದೇಶದಿಂದ ಚಾಸಾ.1 ರವರ ಮೇಲೆ ಜಗಳ ತೆಗೆದು 1 ನೇ ಆರೋಪಿ ಆದ ನೀನು ಚಾಸಾ.1 ರವರನ್ನು ಕುರಿತು ಲೋಫರ್ ನನ್ನ ಮಗನೇ ಭಯಪಟ್ಟು ಓಡಿ ಬಂದೆಯಾ ಎಂದು ಹಾಗೂ 4 ನೇ ಆರೋಪಿಯಾದ ನೀನು ಸಾಕ್ಷಿ-2 ರವರನ್ನು ಕುರಿತು ಬೋಸಡಿ ಮುಂಡೆ ನೀನು ಅಡ್ಡ ಬರುತ್ತೀಯಾ ಎಂದು ಅವ್ಯಾಚ ಶಬ್ದಗಳಿಂದ ಬೈದಿದ್ದು ಹಾಗೂ ಸಾರ್ವಜನಿಕ ಶಾಂತತೆಯನ್ನು ಭಂಗ ಮಾಡಲು ಪ್ರಚೋದಿಸಿರುತ್ತೀಯಾ, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.504 ಸಹವಾಚಕ 34 ರ ಮೇರೆಗೆ ದಂಡನೀಯವಾದ ಅಪರಾಧ ಎಸಗಿದ್ದು ನನ್ನ ಸಂಜ್ಞೆಯೊಳಗಿರುತ್ತದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಅಕ್ರಮಕೂಟದ ಸದಸ್ಯರುಗಳಾಗಿ ಸದರಿ ಅಕ್ರಮ ಕೂಟದ ಸಮಾನ ಉದ್ದೇಶದಿಂದ, 1 ನೇ ಆರೋಪಿ ಆದ ನೀನು ಚಾಸಾ.1 ರವರ ಬಲಕೈ ಮೇಲೆ ಹೊಡೆದು ಕೆಳಕ್ಕೆ ತಳ್ಳಿ ಎಳೆದಾಡಿ ಆತನ ಬಲಕೈ ಮೂಳೆ ಮುರಿಯುವಂತಹ ಭಾರಿ ಗಾಯ ಹಾಗೂ ಎಡಕಾಲಿನ ಮೇಲೆ ತರಚಿದ ರಕ್ತಗಾಯವನ್ನುಂಟು ಮಾಡಿ, 4 ನೇ ಆರೋಪಿಯಾದ ನೀನು ಚಾಸಾ. 2 ರವರಿಗೆ ಕೈಗಳಿಂದ ಬೆನ್ನಿನ ಕೆಳಭಾಗದಲ್ಲಿ ಹೊಡೆದು, ಬಲಕೈಯನ್ನು

ತಿರುವಿ ಮೂಳೆ ಮುರಿಯುವಂತಹ ಭಾರೀ ಗಾಯಗಳನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.325 ಸಹವಾಚಕ 34 ರ ಮೇರೆಗೆ ದಂಡನೀಯವಾದ ಅಪರಾಧ ಎಸಗಿದ್ದು ನನ್ನ ಸಂಜ್ಞೆಯೊಳಗಿರುತ್ತದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಅಕ್ರಮಕೂಟದ ಸದಸ್ಯರುಗಳಾಗಿ ಸದರಿ ಅಕ್ರಮ ಕೂಟದ ಸಮಾನ ಉದ್ದೇಶದಿಂದ, 3 ನೇ ಆರೋಪಿಯಾದ ನೀನು ಸಾಕ್ಷಿ-1 ರವರ ತಲೆಯ ಮೇಲೆ, ಎಡಕೈ ಮೇಲೆ ಹೊಡೆದು ನೋವಿನ ಗಾಯವನ್ನುಂಟು ಮಾಡಿದ್ದು, ಸಾಕ್ಷಿ-1 ರವರ ಎಡಕಾಲಿನ ಮೇಲೆ ತರಚಿದ ರಕ್ತಗಾಯವನ್ನುಂಟು ಮಾಡಿ, ಕೈಗಳಿಂದ ಚಾಸಾ.2 ರವರ ಎಡಭುಜದ ಮೇಲೆ ಹೊಡೆದು ಸಾಧಾರಣ ಊದಿದ ನೋವಿನ ಗಾಯವನ್ನುಂಟು ಮಾಡಿ, 2 ನೇ ಆರೋಪಿಯಾದ ನೀನು ಚಾಸಾ. 2 ರವರ ಎಡಕೈನ ಕಿರುಬೆರಳನ್ನು ಕೈಗಳಿಂದ ತಿರುವಿ ಊದಿದ ನೋವಿನ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ. 323 ಸಹವಾಚಕ 34 ರ ಮೇರೆಗೆ ದಂಡನೀಯವಾದ ಅಪರಾಧ ಎಸಗಿದ್ದು ನನ್ನ ಸಂಜ್ಞೆಯೊಳಗಿರುತ್ತದೆ.

ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅದು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಆದ್ದರಿಂದ ನೀವುಗಳು ಮೇಲ್ಕಂಡ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

1. ಮೇಲೆ ಹೇಳಿದಂತೆ ನಿನಗೆ ಓದಿ ಹೇಳಿ ವಿವರಿಸಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡೆಯಾ?

ಉ. ಹೌದು

2. ಅಪರಾಧವನ್ನು ಒಪ್ಪಿಕೊಳ್ಳುವೆಯಾ ಅಥವಾ ಆರೋಪ ವಿಚಾರಣೆಯಾಗಬೇಕ?

ಉ. ವಿಚಾರಣೆಯಾಗಬೇಕು

ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅದು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ 29 ನೇ ಜುಲೈ - 2015.

(ಶ್ರೀಮತಿ ಅನಿತ. ಜಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಶಿಡ್ಲಘಟ್ಟ.